**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 50/2016**

**ಸಿ ಡಬ್ಲೂಃ42 ಪಿ ಡಬ್ಲ್ಯೂಃ37**

**ಹೆಸರುಃ ಮತ್ತಪ್ಪ**

**ತಂದೆ ಹೆಸರುಃ ಸೋಮಲಿಂಗಪ್ಪ ಪಾಟೀಲ**

**ವಯಸ್ಸುಃ 55 ವರ್ಷಗಳು.**

**ಉದ್ಯೋಗಃ ಡಿ ಎಸ್ ಪಿ.**

**ವಾಸ ಸ್ಥಳಃ ಹುಬ್ಬಳ್ಳಿ**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 08.04.2026**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ದಿಃ 03.10.2013 ರಿಂದ 12.08.2016 ರವರೆಗೆ ನಾನು ಕುಂದಗೋಳ ಪೋಲಿಸ ಠಾಣೆಯಲ್ಲಿ ಪೊಲೀಸ ನೀರಿಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ನಾನು ದಿಃ 03.10.2013 ರಂದು ಸದರಿ ಪ್ರಕರಣದ ಕಡತವನ್ನು ಚಾಸಾಃ41 ರವರಿಂದ ಸ್ವಿಕರೀಸಿ ತನಿಖೇಯನ್ನು ಮುಂದುವರೆಸಿರುತ್ತೇನೆ. ದಿಃ 23.12.2014 ರಂದು ಚಾಸಾಃ39 ರವರು ದಾಖಲೆಗಳನ್ನು ನನ್ನ ಮುಂದೆ ಹಾಜರುಪಡಿಸಿದ್ದು. ಸದರಿ ದಾಖಲೆಗಳನ್ನು ಈ ಪ್ರಕರಣದ ಕಡತಗಳಿಗೆ ಅಳವಡಿಸಿಕೊಂಡಿರುತ್ತೇನೆ. 2009-10 ನೇ ಸಾಲಿನ ಕ್ಯಾಶ ಬುಕ್ಕ ದಿಃ01.04.2009 ರಿಂದ 31.01.2011, ಸೇವಿಂಗ್ಸ ಬ್ಯಾಂಕ ಪಾಸ್ ಬುಕ್ಕ ಎಸ್ ಬಿ ಅಕೌಂಟ ನಂಃ2019503 ಮೂಲ ದಾಖಲೆಯನ್ನು, ಕೆವಿಜಿ ಬ್ಯಾಂಕ ಇಂಗಳಗಿ ಬ್ರ್ಯಾಂಚನ ಚೆಕ್ಕ ಬುಕ್ಕ ಅಕೌಂಟ ನಂಃ9503 ಗೆ ಸಂಬಂದಪಟ್ಟದ್ದನ್ನು , ಕೆವಿಜಿ ಬ್ಯಾಂಕ ಗ್ರಾಮ ಪಂಚಾಯತ ಇಂಗಳಗಿ ಚೆಕ್ಕ ಬುಕ್ಕ ಅಕೌಂಟ ನಂಃ201/9503 ಗೆ ಸಂಬಂದಪಟ್ಟದ್ದನ್ನು, ಕೆವಿಜಿ ಬ್ಯಾಂಕ ಗ್ರಾಮ ಪಂಚಾಯತ ಇಂಗಳಗಿ ಚೆಕ್ಕ ಬುಕ್ಕ ಅಕೌಂಟ ನಂಃ9503 ಗೆ ಸಂಬಂದಪಟ್ಟದ್ದನ್ನು, ಕೆವಿಜಿ ಬ್ಯಾಂಕ ಗ್ರಾಮ ಪಂಚಾಯತ ಇಂಗಳಗಿ ಚೆಕ್ಕ ಬುಕ್ಕ ಅಕೌಂಟ ನಂಃ9503 ಗೆ ಸಂಬಂದಪಟ್ಟದ್ದನ್ನು , ಎನ್ ಎಮ್ ಆರ್ ಸಂಃ61958 ಸಹಾಯಕ ಇಂಜಿನೀಯರ ಇವರು ಕೊಟ್ಟ ವರದಿ ಮತ್ತು ಮೂಲ ಕೂಲಿಕಾರರ ಹಾಜರಾತಿ ಪಟ್ಟಿಯನ್ನು ಒಟ್ಟಾರೆಯಾಗಿ ,ಖಾತೆವಾರ ಹಣ ಜಮಾ ಮಾಡಿಕೊಳ್ಳುವ ಏಳು ದೃಢೀಕೃತ ಪ್ರತಿಗಳನ್ನು ಒಟ್ಟಾರೆಯಾಗಿ,ಠರಾವು ಪುಸ್ತಕ,

3. ದಿಃ 24.12.2014 ರಂದು ಸಿ ಡಬ್ಲೂ 10, 11, 14, 15, 17, 21, 24, 25, 26,32 ಮತ್ತು 33 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿಃ 27.12.2014 ರಂದು ಸಿಡಬ್ಲೂ 4,6 ,7, 8,9, 21, 23, 27, ಮತ್ತು 28 ರವರ ಹೇಳಿಕೆಗಳನ್ನು ದಾಖಕಿಸಿಕೊಂಡಿರುತ್ತೇನೆ. ದಿಃ 28.12.2014 ರಂದು ಸಿಡಬ್ಲೂಃ 13 ಮತ್ತು 14 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿಃ03.01.2015 ರಂದು ಕರ್ನಾಟಕ ವಿಕಾಸ ಗ್ರಾಮೀನ ಬ್ಯಾಂಕನವರು 2 ಉಳಿತಾಯ ಖಾತೆಗೆಳ ಸ್ಟೆಟಮೆಂಟಗಳನ್ನು ಪೂರೈಸಿದ್ದು ಅವುಗಳನ್ನು ಈಗಾಗಲೇ ನಿಪಿಃ66 ಎಂದು ಪಿಡಬ್ಲೂಃ34 ರ ಮುಖಾಂತರ ನಿಶಾನೆಗೆ ಒಳಪಡಿಸಲಾಗಿರುತ್ತದೆ. ದಿಃ08.01.2015 ರಂದು ಶಾಖಾ ನಿರ್ವಾಹಕ ಎಸ್.ಬಿ.ಐ ಕುದಗೋಳ ಇವರು ಸ್ಟೆಂಟಮಂಟ ಆಫ್ ಅಕೌಂಟ್ಸನ ದೃಡಿಕೃತ ಪ್ರತಿ ನೀಡಿರುತ್ತಾರೆ. ಅದೇ ದಿನ ಚಾಸಾಃ 36 ಮತ್ತು 37 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

4. ದಿಃ 14.01.2015 ರಂದು ಚಾಸಾಃ1 ರವರ ಪುನಃ ಹೇಳಿಕೆ ಮುತ್ತ ಚಾಸಾಃ4 ಮತ್ತು 5 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ದಿಃ 20.01.2015 ರಂದು ಇಂಗಳಗಿ ಗ್ರಾಮ ಪಂಚಾಯತ್ ಠರಾವು ಪುಸ್ತಕವನ್ನು ಪಿಡಿಒ ಗ್ರಾಮ ಪಂಚಾಯತ್ ಇವರು ನೀಡಿದ್ದು ಅದನ್ನು ಈಗಾಗಲೆ ನಿಪಿಃ 69 ಎಂದು, ಫ್ರಾಸಾಃ 34 ರವರ ಮೂಲಕ ನಿಶಾನೆಗೆ ಒಳಪಡಿಸಲಾಗಿರುತ್ತದೆ. ನಂತರ ಶ್ರೀ.ವಿ ಎಮ್ ತಿರಕನಗೌಡ್ರ ಇವರು ಇಂಗಳಗಿ ಗ್ರಾಮ ಪಂಚಾಯತ ನಲ್ಲಿ ಸೇವೆ ಸಲ್ಲಿಸಿರುವ ಬಗ್ಗೆ ತಾಲೂಕ ಪಂಚಾಯತ ಇವರು ಪೂರೈಸಿರುತ್ತಾರೆ.

5. ದಿಃ 23.01.2015 ರಂದು ಕೆ ವಿ ಜಿ ಬ್ಯಾಂಕ ಕುಂದಗೊಳ ಎಸ್ ಬಿ ಐ ಬ್ಯಾಂಕ ಕೂಬಿಪಿಹಾಳ ಇವರು ಉಳಿತಾಯ ಖಾತೆಯ ಸ್ಟೆಂಟಮೆಂಟನ ದೃಡಿಕೃತ ಪ್ರತಿಯನ್ನು ನೀಡಿರುತ್ತಾರೆ. ದಿಃ 02.03.2015 ರಂದು ಇಂಗಳಗಿ ಗ್ರಾಮ ಪಂಚಾಯ ಸಿಬ್ಬಂದಿಗಳ ವೇತನ ಬಟವಟೆ ಮಾಡಿರುವ ಬಗ್ಗೆ ರಜಿಸ್ಟರನ್ನು ಪಡೆದಿರುತ್ತೇನೆ. ಚಾಸಾಃ 37 ರವರ ಪುನಃ ಹೆಳಿಕೆಯನ್ನು ದಾಖಲಿಸಿಕೊಡಿಂರುತ್ತೇನೆ. ದಿಃ 20.01.2015 ರಂದು ಚಾಸಾಃ 37 ರವರ ಪನಃ ಹೇಳಿಕೆ ಪಡೆದಿರುತ್ತೇನೆ. ನಂತರ ಪ್ರಕರಣದ ತನಿಖೆ ಮುಕ್ತಾಯಗೋಳಿಸಿ ಆರೋಪಿತರು ಮೆಲ್ನೊಟಕ್ಕೆ ಅಪರಾಧ ಎಸಗಿರುವುದು ಕಂಡು ಬಂದಿದ್ದರಿಂದ ಅವರ ವಿರುದ್ದ ದಿಃ 14.06.2015 ರಂದು ದೊಷಾರೋಪಣಾ ಪಟ್ಟಿಯನ್ನು ನ್ಯಾಯಾಯಕ್ಕೆ ಸಲ್ಲಿಸಿರುತ್ತೆನೆ.

**<u>ಪಾಟೀ ಸವಾಲುಃ ಶ್ರೀ ಸಿ ಎಮ್ ಕೆ ವಕೀಲರಿಂದ 1 ಆರೋಪಿ ಪರ ವಕೀಲರುಃ</u>**

**1.** ಆರೋಪಿತರ ವಿರುದ್ಧ ಹಣ ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ದೂರು ಬಂದಿರುತ್ತದೆ. ಅದು ಯಾವ ಸ್ಕಿಮ ಅಡಿಯಲ್ಲಿ ಎಂದರೆ ಸಾಕ್ಷಿ ಮರೆಗಾ ಯೋಜನೆ ಅಡಿಯಲ್ಲಿ ಎಂದು ನುಡಿಯುತ್ತಾರೆ. ನನಗೆ ಸದರಿ ಸ್ಕಿಮ ಬಗ್ಗೆ ಮಾಹಿತಿ ಇದೆ. ಸದರಿ ಸ್ಕಿಮ ರಸ್ತೆ ನಿರ್ಮಾಣ ಮಾಡುವ ಬಗ್ಗೆ ಆಗಿದ್ದು ಇರುತ್ತದೆ. ಸದರಿ ಸ್ಕಿಮುಗೆ ಸಂಬಂದಪಟ್ಟ ಹಾಗೆ ಮಂಜೂರಾದ ಹಣ ಸರಿಯಾಗಿ ಬಳಕೆ ಆಗದೆ ಆ ಪ್ರಕಾರ ರಸ್ತೆಗಳು ನಿರ್ಮಾಣ ಆಗಿದೆಯಾ ಎಂಬುದನ್ನು ನೀವು ತನಿಖಾ ಕಾಲಕ್ಕೆ ಪರಿಶೀಲನೆ ಮಾಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

2. ನಾನು ಚಾಸಾಃ 41 ರವರಿಂದ ಸದರಿ ಕಡತಗಳನ್ನು ಪಡೆಯುವ ಮುನ್ನ ಪರಿಶಿಲಿಸಿ ಸ್ವಿಕರಿಸಿರುತ್ತೇನೆ. ಕಡತಗಳನ್ನು ನಾನು ಪರಿಶಿಲಿಸದೆ ಸ್ವಿಕರಿಸಿರುತ್ತೇನೇ ಎಂದರೆ ಸರಿಯಲ್ಲ. ಚಾಸಾಃ39 ನಮ್ಮ ಠಾಣಾ ಎ.ಸ್.ಐ ಆಗಿದ್ದರು. ನಿಪಿಃ 55 ರಿಂದ 63 ದಾಖಲೆಗಳನ್ನು ಚಾಸಾಃ 39 ರವರು ಸ್ವಿಕರಿಸಿಕೊಂಡಿದ್ದರು. ಚಾಸಾಃ39 ರವರು ಸದರಿ ಪ್ರಕರಣದ ತನಿಖಾದಿಕಾರಿಯಾಗಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಪ್ರಕಾರ ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ಪುನ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೆ ವಿ ಜಿ ಬ್ಯಾಂಕ ಕುದಂಗೊಳ, ಕೆವಿಜಿ ಬ್ಯಾಂಕ ಇಂಗಳಗಿ ಮತ್ತು ಎಸ ಬಿ ಐ ಬ್ಯಾಂಕ ಕುಂದಗೊಳ ಇವರಿಂದ ಯಾವುದೆ ಅಕೌಂಟ ಸ್ಟೆಟ ಮೆಂಟಗಳನ್ನು ಸ್ವಿಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿಃ 69 ನ್ನು ಸಹ ನಾನು ತನಿಖಾ ಕಾಲಕ್ಕೆ ಪಡೆದಿರುವುದಿಲ್ಲ ಎಂದರೆ ಸೆರಿಯಲ್ಲ, ಅದೇ ರೀತಿ ನಾನು ವಿ ಎಮ್ ತಿರಕನಗೌಡ್ರ ಇವರ ಸೇವಾ ದೃಡಿಕೃತ ಪ್ರತಿಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ವೇತನ ಬಟವಟೆ ರಜಿಸ್ಟರನ್ನು ಸಹ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ, ಸದರಿ ಪ್ರಕರಣಕ್ಕೆ ಸಂದಬಂದಪಟ್ಟ ಹಾಗೆ ಹಣ ದುರ್ಬಳಕೆ ಆಗದಿರುವುದು ತನಿಖಾ ಕಾಲದಲ್ಲಿ ಕಂಡು ಬರದೆ ಇದ್ದರು ಸಹ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೇ ಸರಿಯಲ್ಲ, 1 ನೇ ಆರೋಪಿತ ಈ ಪ್ರಕರಣದಲ್ಲಿ ಯಾವುದೇ ಹಣ ಅಪರಾತಪರಾ ಮಾಡಿರುವುದು ತನಿಖೆಯಲ್ಲಿ ಕಂಡುಬಂದಿರುವುದಿಲ್ಲ ಹಾಗೂ ಅಪರಾತಪರಾ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎ ಆರ್ ಕೆ ವಕೀಲರಿಂದ 2 ನೇ ಆರೋಪಿ ಪರ ವಕೀಲರುಃ**

2 ನೇ ಆರೋಪಿ ಯಾರು ಎಂದರೆ ಸಾಕ್ಷಿ ಕಡತಗಳನ್ನು ಪರಿಶಿಲಿಸಿ ಅವರು ಮೆಹಬೂಸಾಬ್ ಅಲಿಸಾಬ ನಧಾಪ ಎಂದು ನುಡಿಯುತ್ತಾರೇ. 2 ನೇ ಆರೋಪಿತ ಈ ಪ್ರಕರಣದಲ್ಲಿ ಯಾವುದೇ ಹಣ ಅಪರಾತಪರಾ ಮಾಡಿರುವುದು ತನಿಖೆಯಲ್ಲಿ ಕಂಡುಬಂದಿರುವುದಿಲ್ಲ ಹಾಗೂ ಅಪರಾತಪರಾ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಮ್ ಜಿ ಪಿ ವಕೀಲರಿಂದ 4 ನೇ ಆರೋಪಿ ಪರ ವಕೀಲರುಃ**

4 ನೇ ಆರೋಪಿ ಈ ಪ್ರಕರಣದಲ್ಲಿ ಯಾವುದೇ ಹಣ ಅಪರಾತಪರಾ ಮಾಡಿರುವುದು ತನಿಖೆಯಲ್ಲಿ ಕಂಡುಬಂದಿರುವುದಿಲ್ಲ ಹಾಗೂ ಅಪರಾತಪರಾ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಮ್ ಬಿ ಬಿ ವಕೀಲರಿಂದ 5 ನೇ ಆರೋಪಿ ಪರ ವಕೀಲರುಃ**

5 ನೇ ಆರೋಪಿ ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆ ಮತ್ತು ಪಂಚಾಯತ ಎರಡು ಬೆರೆ ಬೆರೆ ಇಲಾಖೇಗಳು ಎಂದರೆ ಸರಿ. 5 ನೇ ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. 5 ನೇ ಆರೋಪಿ ಈ ಪ್ರಕರಣದಲ್ಲಿ ಯಾವುದೇ ಹಣ ಅಪರಾತಪರಾ ಮಾಡಿರುವುದು ತನಿಖೆಯಲ್ಲಿ ಕಂಡುಬಂದಿರುವುದಿಲ್ಲ ಹಾಗೂ ಅಪರಾತಪರಾ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯಾ ಸಂಪೂರ್ಣ ಪಾಟಿ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**(ಶ್ರೀಮತಿ ಗಾಯತ್ರಿ)**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**